ಎರಡು ಚರಾಕ್ಷರವುಳ್ಳ ರೇಖಾತ್ಮಕ ಸಮೀಕರಣಗಳು- ಬಹು ಆಯ್ಕೆ ಪ್ರಶ್ನೆಗಳು

ವಿದ್ಯಾರ್ಥಿಯ ಹೆಸರು :

ಸೂಚನೆ :- ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಿದ ನಂತರ ಕೆಳಗೆ ಇರುವ *"Finish"* ಬಟನ್ ಕ್ಲಿಕ್ ಮಾಡಿ. ನಿಮ್ಮ ಉತ್ತರ ಸರಿ ಇದ್ದರೆ ಹಸಿರು ಮತ್ತು ತಪ್ಪಾಗಿದ್ದರೆ ಕೆಂಪು ಬಣ್ಣಗಳಲ್ಲಿ ಬರುವುದು.

1. $a_1x+b_1y+c_1=0$ ಮತ್ತು $a_2x+b_2y+c_2=0$ ರೇಖೆಗಳಜೋಡಿಗಳು ಛೇದಿಸುವ ರೇಖೆಗಳಾದಾಗ ಅವುಗಳ ಸಹಗುಣಕಗಳ ಅನುಪಾತದ ಹೋಲಿಕೆಯು

   A) $\frac{a_1}{a_2} \neq \frac{b_1}{b_2}$ B) $\frac{a_1}{a_2} = \frac{b_1}{b_2} \neq \frac{c_1}{c_2}$ C) $\frac{a_1}{a_2} = \frac{b_1}{b_2} = \frac{c_1}{c_2}$ D) ಯಾವುದೂ ಅಲ್ಲ

2. ಎರಡು ಚರಾಕ್ಷರವುಳ್ಳ ರೇಖಾತ್ಮಕ ಸಮೀಕರಣಗಳಾದ $x+2y=3$ ಮತ್ತು $2x+4y=k$ ಗಳು ಐಕ್ಯಗೊಂಡರೆ k ನ ಬೆಲೆ

   A) 3 B) 6 C) -3 D) -6

3. $x - y = 2$ ಮತ್ತು $x+y=4$ ಈ ಸಮೀಕರಣಗಳ ಪರಿಹಾರಗಳು

   A) (3,1) B) (4,3) C) (5,1) D) (-1,-3)

4. $2x+y = 11$ ಮತ್ತು $x+y=8$ ಈ ಸಮೀಕರಣಗಳಲ್ಲಿ x ಮತ್ತು y ಗಳ ಬೆಲೆಗಳು ಕ್ರಮವಾಗಿ

   A) -3,5 B) 2,5 C) 5,3 D) 3,5

5. ಜೋಡಿ ಸಮೀಕರಣಗಳಾದ $3x+2ky-2=0$ ಮತ್ತು $2x+5y+1=0$ ಗಳು ಸಮಾಂತರ ರೇಖೆಗಳಾದರೆ k ನ ಬೆಲೆಯು

   A) $\frac{4}{5}$ B) $\frac{15}{4}$ C) $\frac{4}{5}$ D) $\frac{5}{4}$

6. $4x+py+8=0$ ಮತ್ತು $2x+2y+4=0$ ಜೋಡಿ ಸಮೀಕರಣಗಳಲ್ಲಿ p ಯಾವ ಬೆಲೆಗೆ ಅಪರಿಮಿತ ಪರಿಹಾರವಿರುತ್ತದೆ

   A) 2 B) 4 C) -2 D) -4

7. k ನ ಯಾವ ಬೆಲೆಗೆ ,ಈ ರೇಖಾತ್ಮಕ ಸಮೀಕರಣಗಳ ಜೋಡಿಯು ಅಪರಿಮಿತ ಸಂಖ್ಯೆಯ ಪರಿಹಾರಗಳನ್ನು ಹೊಂದಿರುತ್ತದೆ. $2x+ky-9=0$ ಮತ್ತು $4x+6y-18=0$

   A) -2 B) 2 C) 3 D) 6

8. ಎರಡು ರೇಖಾತ್ಮಕ ಸಮೀಕರಣಗಳ ಜೋಡಿಗೆ ಪರಿಹಾರ ಇರುವುದಿಲ್ಲ (ಅಸ್ಥಿರವಾಗಿದ್ದರೆ) ಆ ಸಮೀಕರಣಗಳನ್ನು ಪ್ರತಿನಿಧಿಸುವ ರೇಖೆಗಳು ಎಂತಹ ರೇಖೆಗಳಾಗಿರುತ್ತವೆ.

   A) ಐಕ್ಯಗೊಳ್ಳುವ ರೇಖೆಗಳು B) ಸಮಾಂತರ ರೇಖೆಗಳು
   C) ಛೇದಿಸುವ ರೇಖೆಗಳು D) ಯಾವುದೂ ಅಲ್ಲ

9. $a_1x+b_1y+c_1=0$ ಮತ್ತು $a_2x+b_2y+c_2=0$ ರೂಪದ ಸಮೀಕರಣಗಳಿಗೆ ಎಳೆದ ರೇಖೆಗಳು ಪರಸ್ಪರ ಐಕ್ಯಗೊಂಡರೆ ಈ ಕೆಳಗಿನವುಗಳಲ್ಲಿ ಯಾವುದು ಸರಿ.

   A) $\frac{a_1}{a_2} = \frac{b_1}{b_2} = \frac{c_1}{c_2}$ B) $\frac{a_1}{a_2} = \frac{b_1}{b_2} \neq \frac{c_1}{c_2}$ C) $\frac{a_1}{a_2} \neq \frac{b_1}{b_2}$ D) $\frac{a_1}{a_2} \neq \frac{b_1}{b_2} \neq \frac{c_1}{c_2}$

10. $x+y=5$ ಮತ್ತು $x-y=8$ ಈ ಜೋಡಿ ರೇಖಾತ್ಮಕ ಸಮೀಕರಣಗಳಿಗೆ ಸಂಬಂಧಿಸಿದಂತೆ ಕೆಳಗಿನ ಯಾವುದು ಸರಿ.

    A)ಯಾವುದೇ ಪರಿಹಾರ ಇಲ್ಲ B) ಅನನ್ಯ ಪರಿಹಾರ ಹೊಂದಿದೆ
    C) ಅಪರಿಮಿತ ಪರಿಹಾರ ಹೊಂದಿದೆ D) ಈ ಮೇಲಿನ ಯಾವುದು ಅಲ್ಲ

PRAKASHA H G, GHS, BOMLAPURA, KOPPA TALUK, CHIKKAMAGALURU

LIVEWORKSHEETS

11.2x+y-6=0 ಮತ್ತು 4x-2y-4=0 ಈ ಜೋಡಿ ರೇಖಾತ್ಮಕ ಸಮೀಕರಣಗಳ ಜೋಡಿಗಳು ಯಾವ ವಿಧದ ಸಮೀಕರಣಗಳಿಗೆ ಉದಾಹರಣೆಯಾಗಿದೆ?

A)ಸ್ಥಿರ B) ಅಸ್ಥಿರ C) ಅವಲಂಭಿತ ಸ್ಥಿರ D) ಯಾವುದೂ ಅಲ್ಲ

12. 2x-5y+4=0 ಮತ್ತು 4x-10y-8=0 ಈ ಜೋಡಿ ರೇಖಾತ್ಮಕ ಸಮೀಕರಣಗಳು

A)ನಿಖರವಾಗಿ ಎರಡು ಪರಿಹಾರ ಹೊಂದಿವೆ B) ಅನನ್ಯ ಪರಿಹಾರ ಹೊಂದಿವೆ

C) ಅಪರಿಮಿತ ಸಂಖ್ಯೆಯ ಪರಿಹಾರ ಹೊಂದಿವೆ D) ಪರಿಹಾರವಿರುವುದಿಲ್ಲ

13. 5x-4y+8=0 ಮತ್ತು 7x+6y-9=0 ಈ ಜೋಡಿ ರೇಖಾತ್ಮಕ ಸಮೀಕರಣಗಳು ಪ್ರತಿನಿಧಿಸುವ ರೇಖೆಗಳು

A) ಛೇದಿಸುವ ರೇಖೆಗಳು B) ಐಕ್ಯಗೊಳ್ಳುವ ರೇಖೆಗಳು

C) ಸಮಾಂತರ ರೇಖೆಗಳು D) ಲಂಬ ರೇಖೆಗಳು

14. x+y=5 ಮತ್ತು 2x+2y=1 ಈ ಜೋಡಿ ಸಮೀಕರಣಗಳಿಗೆ ......ಪರಿಹಾರಗಳಿವೆ.

A)ಒಂದೇ ಒಂದು B) ಎರಡು C) ಅನಂತ D) ಪರಿಹಾರಗಳಿಲ್ಲ

15. ಎರಡು ಚರಾಕ್ಷರವುಳ್ಳ ರೇಖಾತ್ಮಕ ಸಮೀಕರಣಗಳ ಜೋಡಿಗಳು ಸ್ಥಿರವಾಗಿದ್ದರೆ ,ಅವುಗಳ ರೇಖೆಗಳು

A) ಛೇದಿಸುತ್ತವೆ B) ಐಕ್ಯವಾಗುತ್ತವೆ C) ಸಮಾಂತರವಾಗಿರುತ್ತವೆ D) ಲಂಬವಾಗಿರುತ್ತವೆ

16. x ಮತ್ತು y ಗಳ ಯಾವ ಬೆಲೆಗೆ 2x-3y=12 ಈ ಸಮೀಕರಣವು ಸರಿಹೊಂದುತ್ತದೆ

A) x=0 , y=-3 B) x=2 , y=3 C) x=3 , y=-2 D) x=-2 , y=3

17. ರೇಖಾತ್ಮಕ ಸಮೀಕರಣಗಳ ಜೋಡಿಗಳಿಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳಲ್ಲಿ ತಪ್ಪಾಗಿರುವ ಹೇಳಿಕೆ.

A)ರೇಖೆಗಳು ಸಮಾಂತರವಾಗಿದ್ದರೆ ,ಪರಿಹಾರವಿರುವುದಿಲ್ಲ

B) ರೇಖೆಗಳು ಲಂಬವಾಗಿದ್ದರೆ ,ಪರಿಹಾರವಿರುವುದಿಲ್ಲ

C) ರೇಖೆಗಳು ಪರಸ್ಪರ ಐಕ್ಯವಾಗಿದ್ದರೆ ಅಪರಿಮಿತ ,ಪರಿಹಾರಗಳಿರುತ್ತವೆ.

D) ರೇಖೆಗಳು ಪರಸ್ಪರ ಛೇದಿಸಿದರೆ ಒಂದು ಪರಿಹಾರ ವಿರುತ್ತದೆ.

18. 2x-y=5 ಈ ಸಮೀಕರಣದಲ್ಲಿ y=1 ಆದರೆ, x ನಬೆಲೆ,

A) 3 B) 6 c) 1 D) 4

19. 2x-8=3y ಈ ಸಮೀಕರಣವನ್ನು ಸಾಮಾನ್ಯ ರೂಪದಲ್ಲಿ ಬರೆದಾಗ,

A) 2x-3y =-8 B) 2x+3y =8 c) 2x-3y -8=0 D) 3y-8= 2x

20. ಎರಡು ಚರಾಕ್ಷರವುಳ್ಳ ರೇಖಾತ್ಮಕ ಸಮೀಕರಣಗಳ ಜೋಡಿಗಳು ಯಾವುದೇ ಪರಿಹಾರ ಹೊಂದಿಲ್ಲದ್ದರೆ ಆ ಜೋಡಿಯು ----- ಆಗಿರುತ್ತದೆ.

A) ಸ್ಥಿರ B) ಅಸ್ಥಿರ C) ಅವಲಂಭಿತ ಸ್ಥಿರ D) ಈ ಮೇಲಿನ ಎಲ್ಲವೂ

21. x-y=10 ಈ ಸಮೀಕರಣದಲ್ಲಿ x=13 ಆದರೆ, y ನಬೆಲೆ ,

A) -3 B) 23 c) 3 D) -23

22. ಎರಡು ರೇಖಾತ್ಮಕ ಸಮೀಕರಣಗಳ ಜೋಡಿ ಅಪರಿಮಿತ ಪರಿಹಾರಗಳನ್ನು ಹೊಂದಿದ್ದರೆ ಆ ಸಮೀಕರಣಗಳನ್ನು ಪ್ರತಿನಿಧಿಸುವ ರೇಖೆಗಳು ಎಂತಹ ರೇಖೆಗಳಾಗಿರುತ್ತವೆ.

A) ಐಕ್ಯಗೊಳ್ಳುವ ರೇಖೆಗಳು B) ಸಮಾಂತರ ರೇಖೆಗಳು

C) ಛೇದಿಸುವ ರೇಖೆಗಳು D) ಸ್ಥಿರವಾಗಿರುತ್ತವೆ.

PRAKASHA H G, GHS, BOMLAPURA, KOPPA TALUK, CHIKKAMAGALURU

LIVEWORKSHEETS

23. ಎರಡು ರೇಖಾತ್ಮಕ ಸಮೀಕರಣಗಳ ಜೋಡಿಗಳಲ್ಲಿ c_1 ಎಂಬುದು ,

A)ಒಂದನೇ ಸಮೀಕರಣದ x ಸಹಗುಣಕ
B) ಒಂದನೇ ಸಮೀಕರಣದ y ಸಹಗುಣಕ
C) ಎರಡನೇ ಸಮೀಕರಣದ ಸ್ಥಿರಾಂಕ
D) ಒಂದನೇ ಸಮೀಕರಣದ ಸ್ಥಿರಾಂಕ

24. ರಾಮನು ಅಂಗಡಿಯೊಂದರಲ್ಲಿ 3kg ಟೀ ಪುಡಿ ಮತ್ತು 5kg ಸಕ್ಕರೆ ಯನ್ನು ಕೊಂಡನು.ಅದರ ಒಟ್ಟು ಬೆಲೆ 500 ರೂ. ಇದನ್ನು ಸಮೀಕರಣ ರೂಪದಲ್ಲಿ ವ್ಯಕ್ತಪಡಿಸಿದಾಗ,

A) 3x+3y =500
B) 3x-3y =500
c) 3x+5y -500=0
D) 5x+3y =100

25. 2x+y=3 ಮತ್ತು y=mx+3ಈ ಎರಡೂ ಸಮೀಕರಣಗಳು ಒಂದೇ ರೇಖೆಯನ್ನು ಪ್ರತಿನಿಧಿಸಿದರೆ , m ನ ಬೆಲೆ,

A) -3
B) -2
c) 2
D) 3

PRAKASHA H G, GHS, BOMLAPURA, KOPPA TALUK, CHIKKAMAGALURU

LIVEWORKSHEETS